## ಸಭಾ ನಡವಳಿಗಳು

**ವಿಷಯ: ಸಭಾಂಗಣ-1ರಲ್ಲಿ ದಿನಾಂಕ 18-06-2016 ರಂದು ವಲಯವಾರು ಸಾರ್ವಜನಿಕ, ಸಮುದಾಯ ಶೌಚಾಲಯಗಳ ನಿರ್ಮಾಣ ಹಾಗೂ ರಿಪೇರಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಇ-ಟಾಯ್ಲೆಟ್ ನಿರ್ಮಾಣ ಮತ್ತು ವಾರ್ಡ್‌ಗಳನ್ನು ಬಯಲು ಮಲವಿಸರ್ಜನೆ ಮುಕ್ತ ಪ್ರದೇಶವನ್ನಾಗಿ ಘೋಷಿಸುವ ಬಗ್ಗೆ ವಿಶೇಷ ಆಯುಕ್ತರು (ಆ&ಘ,ತ್ಯಾ.ನಿ)ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು:-**

1. ಜಂಟಿ ಆಯುಕ್ತರು (ಆ&ಘ,ತ್ಯಾ.ನಿ), ಯಲಹಂಕ, ರಾ.ರಾ ನಗರ.
2. ಮುಖ್ಯ ಅಭಿಯಂತರರು ಯಲಹಂಕ, ಮಹದೇವಪುರ, ದಕ್ಷಿಣ, ಬೊಮ್ಮನಹಳ್ಳಿ.
3. ಅಧೀಕ್ಷಕ ಅಭಿಯಂತರರು ಯಲಹಂಕ, ದಾಸರಹಳ್ಳಿ, ರಾ.ರಾ ನಗರ, ಪಶ್ಚಿಮ, ಪೂರ್ವ.
4. ವಲಯಗಳ ಕಾ.ಪಾ.ಅ, ಸ.ಕಾ.ನಿ.ಯ, ತಾಂತ್ರಿಕ ಸಹಾಯಕರು ಇತರರು.

**ವಿಷಯ 1 :** ವಿವಿಧ ಶೌಚಾಲಯ ನಿರ್ಮಾಣ ಮತ್ತು ರಿಪೇರಿಗೆ ಸಂಬಂಧಿಸಿದಂತೆ ಮಹದೇವಪುರ ಮತ್ತು ದಕ್ಷಿಣವಲಯದವರು ಎ.ಸಿ.ಎಫ್. ರವರಿಗೆ ವರ್ಕ್ ಕೋಡ್ ನೀಡಲು ನಿರ್ದೇಶನ ಕೋರಿದರು.

**ತೀರ್ಮಾನ:** ಈಗಾಗಲೇ ಸರ್ಕಾರದ ಹಾಗೂ ವಿಶೇಷ ಆಯುಕ್ತರು ಕಛೇರಿಯಿಂದ ಹೊರಡಿಸಿರುವ ಆದೇಶವನ್ನು ಉಲ್ಲೇಖಿಸಿ ಕೋಡ್ ಪಡೆಯಲು ಸೂಚಿಸಲಾಯಿತು.

**ವಿಷಯ 2 :** ಮುಂದಿನ ಒಂದು ವಾರದೊಳಗೆ ಸಾರ್ವಜನಿಕ ಶೌಚಾಲಯಗಳನ್ನು ದುರಸ್ತಿ ಮಾಡುವ ಸಂಬಂಧ ಎಲ್ಲಾ ವಲಯದವರು ತುರ್ತಾಗಿ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಲು ಚರ್ಚಿಸಲಾಯಿತು. ವಲಯದ ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು ಈಗಾಗಲೇ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿರುತ್ತದೆಯೆಂದು ತಿಳಿಸಿರುತ್ತಾರೆ.

**ತೀರ್ಮಾನ:** ಈ ಕುರಿತಂತೆ ಎಲ್ಲಾ ವಲಯದ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರು ಒಂದು ವಾರದೊಳಗೆ ಟೆಂಡರ್ ಕರೆದು ಕ್ರಮ ವಹಿಸಲು ನಿರ್ದೇಶಿಸಲಾಯಿತು. ಮುಂದುವರೆದು

**ವಿಷಯ 3:** ಸಮುದಾಯ ಶೌಚಾಯಲಗಳ ನಿರ್ಮಾಣ ಹಾಗೂ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಕುರಿತು.

**ತೀರ್ಮಾನ:** ಶೌಚಾಲಯ ರಹಿತ ಮನೆಗಳನ್ನು ಸರ್ವೆ ಮಾಡಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಆನ್ ಲೈನ್‌ನಲ್ಲಿ ಅರ್ಜಿ ಸ್ವೀಕರಿಸಿ ಭಾರತ ಸರ್ಕಾರ ಮಾರ್ಗಸೂಚಿಯಂತೆ ಹಣ ಬಿಡುಗಡೆ ಮಾಡಿ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು. ಈ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಪ್ರಾರಂಭಿಸುವುದು. ಸಮುದಾಯ ಶೌಚಾಲಯಗಳನ್ನು ಈಗಾಗಲೇ ನೀಡಿರುವ ಕ್ರಿಯಾ ಯೋಜನೆಯಂತೆ ತುರ್ತಾಗಿ ನಿರ್ಮಾಣ ಮಾಡುವುದು. ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಕೈ ಬಿಡಬೇಕಾದಲ್ಲಿ ಅದಕ್ಕನುಗುಣವಾದ ಸಮುದಾಯ ಶೌಚಾಲಯ ನಿರ್ಮಾಣವನ್ನು ಮಾಡುವುದು.

**ವಿಷಯ 4 :** ಸಾರ್ವಜನಿಕ ಶೌಚಾಲಯಗಳನ್ನು ಲಭ್ಯವಿರುವ ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ಕೂಡ ನಿರ್ಮಾಣ ಮಾಡಲು ಕೂಡಲೆ ಕ್ರಮ ತೆಗೆದುಕೊಳ್ಳುವ ಕುರಿತು.

**ತೀರ್ಮಾನ:** ಸಾರ್ವಜನಿಕ ಶೌಚಾಲಯಗಳನ್ನು ನಿವಾಸಿಗಳ ಕ್ಷೇಮಾಭಿವೃದ್ಧಿಗಳ ಸಂಘದವರಿಗೆ ಪಿಪಿಪಿ ಮಾದರಿಯಲ್ಲಿ ಕೂಡ ನಿರ್ಮಾಣ ಮಾಡಲು ನೀಡಬಹುದಾಗಿರುತ್ತದೆಯೆಂದು ಅಭಿಪ್ರಾಯಿಸಲಾಯಿತು.

ವಾಣಿಜ್ಯೋದ್ಯಮಿಗಳೊಂದಿಗೆ ಮತ್ತು Public Sector Undertaking ಇಲಾಖೆಗಳನ್ನು ಸಿ.ಎಸ್.ಆರ್. ಚಟುವಟಿಗಳಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ಉತ್ತೇಜಿಸಲು ವಲಯ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕರವರಿಗೆ ನಿರ್ದೇಶಿಸಲಾಯಿತು.

<u>ವಿಷಯ 5 :</u> e-toilet ನಿರ್ಮಾಣ ಮಾಡಲು ವಲಯವಾರು ಸೂಕ್ತ ಸ್ಥಳಗಳನ್ನು ಗುರುತಿಸುವ ಬಗ್ಗೆ ಚರ್ಚೆ.

<u>ತೀರ್ಮಾನ:</u> e-toilet ನಿರ್ಮಾಣ ಮಾಡಲು ವಲಯವಾರು ಸೂಕ್ತ ಸ್ಥಳಗಳನ್ನು ಗುರುತಿಸಿ ಜನ ಪ್ರತಿನಿಧಿಗಳೊಡನೆ ಚರ್ಚಿಸಿ ಮುಖ್ಯ ಅಭಿಯಂತರರು (ಯೋಜನೆ) ರವರ ಕಛೇರಿಗೆ ಕೂಡಲೇ ನೀಡಲು ಸೂಚಿಸಲಾಯಿತು.

<u>ವಿಷಯ 6 :</u> ವಾರ್ಡ್‌ಗಳನ್ನು ಬಯಲು ಮಲವಿಸರ್ಜನೆ ಮುಕ್ತ ಪ್ರದೇಶಗಳೆಂದು ಘೋಷಿಸಲು ವಹಿಸಬೇಕಾಗಿರುವ ಕ್ರಮದ ಕುರಿತಂತೆ ಚರ್ಚೆ.

<u>ತೀರ್ಮಾನ:</u> ವಾರ್ಡ್‌ಗಳನ್ನು ಬಯಲು ಮಲವಿಸರ್ಜನೆ ಮುಕ್ತ ಪ್ರದೇಶಗಳೆಂದು ಘೋಷಿಸಲು ಜಂಟಿ ನಿರ್ದೇಶಕರು (ಸ್ವಚ್ಛ ಭಾರತ್ ಮಿಷನ್)ರವರು ನೀಡಿರುವ protocol ನಂತೆ ಘೋಷಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಬಿಬಿಎಂಪಿಯ ಎಲ್ಲಾ ಎಂಟು ವಲಯಗಳಲ್ಲಿ ವಲಯದ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು ಸೂಕ್ತ ಕ್ರಮವಹಿಸಿ ಬಯಲು ಮಲವಿಸರ್ಜನೆ ಮುಕ್ತ (ODF) ವಾರ್ಡ್‌ಗಳನ್ನು ತುರ್ತಾಗಿ ಗುರುತಿಸಿ/ಸರ್ವೆ ಮಾಡಿ ಹಂತ ಹಂತವಾಗಿ ಬಯಲು ಮಲವಿಸರ್ಜನೆ ಮುಕ್ತ (ODF) ವಾರ್ಡ್‌ಗಳನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

21.1.16

ವಿಶೇಷ ಆಯುಕ್ತರು (ಆ&ಘ.ತ್ಯಾ.ನಿ.)
ಬಿಬಿಎಂಪಿ

<u>ಪ್ರತಿಯನ್ನು:</u>

1) ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2) ಉಪ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3) ಮಾನ್ಯ ಆಯುಕ್ತರು, ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4) ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5) ಪ್ರಧಾನ ಅಭಿಯಂತರರು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7) ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಮುಖ್ಯ ಆರೋಗ್ಯಾಧಿಕಾರಿಗಳು, ಬಿಬಿಎಂಪಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ವಲಯ ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯಾಧಿಕಾರಿಗಳು ಅಧಿಕಾರಿಗಳಿಗೆ ಕಳುಹಿಸುತ್ತಾ, ಮೇಲೆ ಸೂಚಿಸಿರುವಂತೆ ಅಗತ್ಯ ಕ್ರಮವಹಿಸುವುದು.
12) ಕಛೇರಿ ಕಡತಕ್ಕೆ.